www.ecourtsindia.com

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ.**

**ಅಪರಾಧ ಪ್ರಕರಣ ಸಂಖ್ಯೆ 834/2017**

**ಚಾಸಾಃ 7 ಫ್ರಾಸಾಃ 5**

| | |
|---|---|
| ಹೆಸರು | : ಹೇಮಂತ |
| ತಂದೆಯ ಹೆಸರು | : ತುಕ್ರ ಪೂಜಾರಿ |
| ಪ್ರಾಯ | : 38 ವರ್ಷ |
| ಉದ್ಯೋಗ | : ಆಟೋ ಚಾಲಕ |
| ವಾಸ | : ತೆಂಕಕಾರಂದೂರು ಗ್ರಾಮ, ಬೆಳ್ತಂಗಡಿ ತಾಲೂಕು |

**ದಿನಾಂಕ 30-9-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ**

ಸಾಕ್ಷಿಗೆ ಎರಡು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಸಾಕ್ಷಿಯು ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-9 ಮತ್ತು 10 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-9(ಎ) ಮತ್ತು 10(ಎ) ಎಂದು ಗುರುತಿಸಲಾಯಿತು. ಇಲ್ಲಿಗೆ ಸುಮಾರು 7-8 ವರ್ಷಗಳ ಹಿಂದೆ ವೇಣೂರು ಪೊಲೀಸ್ ಠಾಣೆಯಲ್ಲಿ ಸದರಿ ಸಹಿಗಳನ್ನು ಮಾಡಿರುತ್ತೇನೆ. ನಿಪಿ-9 ಮತ್ತು 10 ರಲಿ ಬರೆದಿರುವ ವಿಚಾರಗಳು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ.
***(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕಾಗಿ ಕೋರಿದಂತೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**ಪಾಟೀ ಸವಾಲುಃ ಮಾನ್ಯ ಸ. ಸ. ಅ. ರವರಿಂದಃ**

ದಿನಾಂಕ 2-4-2017 ರಂದು ಪೊಲೀಸರು ತಕ್ಷೀರು ಸ್ಥಳದಲ್ಲಿ ಚಾಸಾ-1 ರವರು ತೋರಿಸಿಕೊಟ್ಟಂತೆ ನನ್ನ ಹಾಗೂ ಚಾಸಾ-6 ರವರ ಸಮಕ್ಷಮ ಸಂಜೆ 4-30 ರಿಂದ 5-15 ಗಂಟೆ ವರೆಗೆ ನಿಪಿ-9 ರಂತೆ ತಕ್ಷೀರು ಸ್ಥಳ ಮಹಜರ್ ಮತ್ತು ನಿಪಿ-10 ರಂತೆ ನಕ್ಷೆಯನ್ನು ತಯಾರು ಮಾಡಿ ಸ್ಥಳದಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯವಾಗಲಿ ಎಂದು ನನಗೇನೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KADK510015592017/truecopy/order-5.pdf

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಪಿ ಎಂ ವಕೀಲರಿಂದಃ**

ಏನೂ ಇರುವುದಿಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳು ಬೆಳ್ತಂಗಡಿ.

(ಸಾ. ಓ. ಹೇ. ಕೇ. ಸ. ಇ. ಎ. ಒ.)

This is a True Copy of the Court Records Online. Authenticated @ districts.ecourtsindia.com/cnr/KADK510015592017/truecopy/order-5.pdf

www.ecourtsindia.com